doc-594
T-P-2

Reg No B G 155 ಶ್ರೀ 23 11 72

in The State **First Golden Jubilee Celebrated Paper 'Satyavadi' daily, Mysore 4**

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂರವೇರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಂಧ್ರದಲ್ಲಿ ಮೂವತ್ತು ರೈಲು ಬಂದ್

ಮೈಸೂರು ದಸರಾ ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 23-11-1972 ಗುರುವಾರ

ಕಲಾಕ್ಷೇತ್ರ

6 ರಿಂದ 7-30 ಸಂಜೆ	ಶ್ರೀಮತಿ ವಿ. ಲಲಿತ, ಮೈಸೂರು	ವೀಣೆ
7-30 ರಿಂದ 8-30	ಶ್ರೀ ಬಿ ಎಸ್. ವಿಜಯರಾಘವ್, ಮೈಸೂರು	ಸಂಗೀತ
8-30 ರಿಂದ 9-30	ಶ್ರೀ ಕೆ. ಬಿ ಮಾಧವರಾವ್, ಮೈಸೂರು	ನೃತ್ಯ

★

ಜೀವನರಾಯನ ಕಟ್ಟೆ

5-30 ರಿಂದ 6-30	ಶ್ರೀ ನೂರ್ ಅಜಾದ್, ಮೈಸೂರು	ಸಂಗೀತ
6-30 ರಿಂದ 8	ಶ್ರೀಮತಿ ಎಂ ಎ ಗಿರಿಜಮ್ಮ, ಮೈಸೂರು	ಸಂಗೀತ
8 ರಿಂದ 9-30	ಶ್ರೀ ಎಂ. ಹೆಚ್. ಅಂಜನಪ್ಪ, ಮೈಸೂರು	ಸಂಗೀತ

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

★

ಕಬಿನಿ ನೀರಂ ಬಿಡುಗಡೆ

ಬೆಂಗಳೂರು— ಕಬಿನಿ ಜಲಾಶಯದ ಯೋಜನೆಯ ಎಡದಂಡೆ ಮತ್ತು ಮಲ್ಲ ಮ್ಮಲ್ಲಹಳ್ಳಿ ಕಾಲುವೆಗೆ ಮುಂದಿನ ವರ್ಷದಿಂದ ನೀರು ಬಿಡುಗಡೆ ಮಾಡಲಾಗುವುದು ಮತ್ತು ಇದರಿಂದಾಗಿ 20 ಸಾವಿರ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯು ವುದೆಂದು ಯೋಜನೆಯ ನಿವೇಶನಕ್ಕೆ ಸಂದರ್ಶನ ನೀಡಿದ ಸಂದರ್ಭದಲ್ಲಿ ಮುಖ್ಯ ಮಂ ತ್ರಿ ಶ್ರಿ. ದೇವರಾಜಅರಸ್‌ರವರು ಹೇಳಿದರು.

★

ಬೆಲೆ ಏರಿಕೆ

ನವದೆಹಲಿ— ಒಂದು ವರ್ಷದಲ್ಲಿ ಸಗಟು ಬೆಲೆ ಶೇಕಡ 11 ಹೆಚ್ಚಿದೆಯೆಂದು ಬಿಡುಗಡೆ ಮಾಡಿರುವ ಅಧಿಕೃತ ಅಂಕಿ ಅಂಶ ತಿಳಿಸುತ್ತದೆ.

ಮುಲ್ಕಿ ಗಂಡಾಂತರ

ಹೈದರಾಬಾದು— ಆಂಧ್ರದಲ್ಲಿ ನಿನ್ನೆ ಮುಲ್ಕಿ ಚಳವಳಿ ಮತ್ತೂ ಭೀಕರಗೊಂ ಡು, ರೈಲು ಸ್ಟೇರ್ಷಗಳ ಮೇಲೆ ಧಾಳಿ ನ ಷ್ಟ ತುಂಬಾ ಹೆಚ್ಚಿದೆ – ತೆಲಂಗಾಣಾ ಭಾ ಗದಲ್ಲಿ ಗಲಾಟೆ ಹೆಚ್ಚಾಗಿತ್ತು – ಚಿರಾಲ ಸ್ಟೇರ್ಷ ಚಳವಳಿಗಾರರ ಮತ್ತು ಸಮಾಜ ದ್ರೋಹಿಗಳ ಕರುಣೆಗೆ ಪಾತ್ರವಾಗಿತ್ತು – ಅಗ್ನಿಸ್ಪರ್ಶ, ಲೂಟಿ ಹೆಚ್ಚಾಗಿ ಪೋಲೀಸರ ಗೋಳೇ ಬಾರು ನಡೆಯಿತು. ಕೃಷ್ಣಾ ಜಿ ಲ್ಲೆಯ ವಿಜಯವಾಡದಲ್ಲಿ ಕೆಲವರು ಸ್ಪಿವೆಂ ಟಿವ್ ಕಸ್ಟಡಿಗೆ ತೆಗೆದುಕೊಳ್ಳಲ್ಪಟ್ಟರು – ಆಂಧ್ರ ಬಂದ್ ನಂತರ ಅನೇಕ ಕಡೆ ನಾಗ ರೀಕ ಜೀವನ ತಣ್ಣಗಾಗಿದೆ - 30 ಪ್ರಯಾ ಣೀಕರ ರೈಲು ವಜಾಮಾಡಲಾಗಿದ್ದು ಮಿ ಕ್ಕವುಗಳ ರಕ್ಷಣೆಗೆ ಕೇಂದ್ರ ಮಿಸಲು ಪೋ ಲೀಸರೂ ಸೇರಿ ತುಂಬಾ ಬಂದೋಬಸ್ತು ಏರ್ಪಡಿಸಲಾಗಿತ್ತು.

○

ಬೇರೆ ಮಾರ್ಗವಿಲ್ಲ

ನವದೆಹಲಿ— ಪಾಕಿಸ್ತಾನವು ಬಂಗಾ ದೇಶಕ್ಕೆ ಮನ್ನಣೆ ಕೊಡದೆ ಬೇರೆ ಮಾರ್ಗ ವಿಲ್ಲವೆಂದು ವಾಯವ್ಯ ಗಡಿ ಬುಡಕಟ್ಟು ಜಿಗರ್ಗಾಕ್ಕೆ ಅಧ್ಯಕ್ಷ ಭುಟ್ಟೋ ತಿಳಿಸಿದರು.

●

ಲಲಿತಕಲಾ ಮಹೋತ್ಸವ

ಮೈಸೂರು— ಪುರಸಭೆಯ ಆಶ್ರಯ ದಲ್ಲಿ ಲಲಿತಕಲಾ ಮಹೋತ್ಸವವನ್ನು ಈ ವರ್ಷ ತಾ||6 12 72ರಿಂದ 12-12-72 ರ ಪೂರ್ತಾ ಪುರಭವನದಲ್ಲಿ ಏರ್ಪಡಿಸಲು ನಿರ್ಧರಿಸಲಾಗಿದೆ. ಹೆಚ್ಚು ವಿವರಗಳನ್ನು ಪುರಸಭೆಯ ರೆವಿನ್ಯೂ ಆಫೀಸರ್‌ರವರಿಂದ ಪಡೆಯಬಹುದ

○

ದಿವ್ಯವಾಣಿ

ಛೀನೂರಿಯು ಶಿಕ್ಷೆಯಲ್ಲಿಲ್ಲ, ಆದರೆ ಅಪರಾಧದಲ್ಲಿದೆ. — ಅಲ್ಫಿಯೆರಿ

ತುರ್ತು ಪರಿಸ್ಥಿತಿ

ನವದೆಹಲಿ— ದೇಶದಲ್ಲಿನ ಒಟ್ಟಾರೆ ಪರಿಸ್ಥಿತಿ ಲೆಕ್ಕಿಸಿ, ತುರ್ತು ಪರಿಸ್ಥಿತಿ ತೆಗೆ ಯುವ ಅವಶ್ಯಕತೆ ಕಂಡುಬಂದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

121 ದಿನಗಳ ಉಪವಾಸ

ಬೆಂಗಳೂರು— ಲಾಲ್‌ಬಾಗ್ ಹೌಸ್‌ನಲ್ಲಿ ನಡೆದ ಶ್ರೀಮತಿ ಧಾಪೂಬಾ ಜಸ್‌ರಾಜ್ ಜೈನ್‌ರವರ 121 ದಿನಗಳ ಉಪವಾಸ ಮುಕ್ತಾಯ ಸಮಾರಂಭದಲ್ಲಿ ಗೌರ್ನರ್ ಶ್ರೀ ಸುಖಾಡಿಯರವರು ಭಾಷಣ ಮಾಡುತ್ತಾ – ರಾಜ್ಯದಲ್ಲಿ ಅಭಾವ ಪರಿಹಾರ ಕಾರ್ಯಗಳಿಗೆ ಜೈನ ಜನಾಂಗದ ಶ್ರೀಗಳೂ, ಧನವಂತರೂ ಉದಾರ ನೆರವು ನೀಡಲು ಕರೆಯಿತ್ತರು; ಅವರ ದೀರ್ಘ ಉಪವಾಸವನ್ನು ಪ್ರಶಂಸಿಸಿ, ಅವರು ತಮ್ಮ ಸ್ಥಳದವರೇ ಆಗಿರುವದಕ್ಕೆ ಹರ್ಷ ವ್ಯಕ್ತ ಪಡಿಸಿದರು.

★

ಲಡ್ಡು ಪ್ರಮಾಣದಲ್ಲಿ ಜೋತಾ ಇಲ್ಲ

ನವದೆಹಲಿ— ತಿರುಪತಿಯ ಶ್ರೀ ವೆಂಕಟೇ ಶಮಣಸ್ವಾಮಿಗೆ ಭಕ್ತರು ಅರ್ಪಿಸುವ ಅರ್ಪಿಸುವ ಲಡ್ಡು ಮತ್ತು ಇತರ ಆಹಾರ ನೈವೇದ್ಯದಲ್ಲಿನ ಪ್ರಮಾಣ ಕಡಮೆ ಮಾ ಡುವಂತೆ ಎಂಡೋನ್ಮೆಂಟ್ಸ್ ಕಮಿಷನರು ಮಾಡಿದ್ದ ಆಜ್ಞೆಯನ್ನು ಸುಪ್ರೀಂಕೋರ್ಟು ಒಂದು ಅಪೀಲು ಅರ್ಜಿಯ ತೀರ್ಪಿನಲ್ಲಿ ಹೊಡೆದುಹಾಕಿತು – ಮೊದಲಿನ ಪ್ರಮಾ ಣದಲ್ಲೇ ಇರುತ್ತದೆ.

★

12 ಪತ್ರಿಕೆಗಳೂ ಹೊರಡಲಿಲ್ಲ !!

ಜಲಂಧರ್— ಇಲ್ಲಿಯ ಪತ್ರಿಕೋದ್ಯೋ ಮ ಮತ್ತು ಪತ್ರಿಕೋದ್ಯೋಗದ ಮಿಂ ಚು ಮುಷ್ಕರದಿಂದ ನಿನ್ನೆ ಸ್ಥಳೀಯ 12 ಪತ್ರಿಕೆಗಳೂ ಹೊರಡಲಿಲ್ಲ – ಸಂಬಳ ಶೇ ಕಡಾ 25 ಹೆಚ್ಚಳವೇಕೆಂದು ಕ್ರಿಯಾ ಸ ಮಿತಿ ಅನಿರ್ದಿಷ್ಟಕಾಲ ಮುಷ್ಕರಕ್ಕೆ ಕರೆ ಇತ್ತಿದೆ.

ವಾರ್ತೆಗಳು

ಹುಬ್ಬಳ್ಳಿ— ಮೈಸೂರು ರಾಜ್ಯದ ಸ್ಥಳಗಳಿಗೆ ರಾಷ್ಟ್ರೀಕೃತ ಸೆಂಟ್ರಲ್ ಬ್ಯಾಂಕು ರೂ. 10.7 ಕೋಟಿ ಕೊಟ್ಟಿದೆ ಎಂದು ಬ್ಯಾಂಕ್ ವಿಭಾಗ ಮ್ಯಾನೇಜರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ನಾಗಪುರ— ಇಂದಿರಾ ಗಾಂಧಿಯರನ್ನು ' ಶಕ್ತಿ ದೇವತೆ " ಎಂದು ಭಾರತ ಆರೋಗ್ಯ ಮಂತ್ರಿ ಶ್ರೀ ಉಮಾಶಂಕರ ದೀಕ್ಷಿತ್‌ರು ಸಂಭೋಧಿಸಿರುವರು.

ಹುಬ್ಬಳ್ಳಿ— ಧಾರವಾಡ ಜಿಲ್ಲಾ 17 ಪಂಚಾಯಿತ್ ಸಮಿತಿಗಳಿಗೆ ಸಂತತಿಹರಣ ಚಿಕಿತ್ಸೆಯಲ್ಲಿ ಗುರಿ ಮುಟ್ಟಿದ್ದರಿಂದ ಅವುಗಳಿಗೆ ಸರಕಾರ ತಲಾ ರೂ 1000 ಬಹುಮಾನಿಸಿದೆ.

ನವದೆಹಲಿ— 5 ನೇ ಯೋಜನೆಯಲ್ಲಿ ಉತ್ಪಾದನೆಯಲ್ಲಿ ಅವಶ್ಯ ಪದಾರ್ಥಗಳಿಗೆ ಬಗ್ಗೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಗುಲ್ಬರ್ಗ— ಈ ಜಿಲ್ಲಾ ಪರಿಹಾರ ಕಾರ್ಯಕ್ಕೆ ಮತ್ತೆ ರೂ. 1 ಕೋಟಿಯನ್ನು ಒದಗಿಸಲಾಗುವುದೆಂದು ಸ್ಟೇಟ್ ಅರ್ಥ ಮಂತ್ರಿ ಶ್ರೀ ಬಿ. ಶಿವಣ್ಣನವರು ಪತ್ರಿಕೆಯವರಿಗೆ ತಿಳಿಸಿದರು — ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿಯು ಮನ್ನಾ ಮಾಡಲಾಗುತ್ತೆ.

ವುಡ್‌ಲಾಂಡ್ಸ್ ಅಮೋಘ 8 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜ ವಾ ನಿ ದಿ ವಾ ನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅ ಪೆ ರಾ 17 11 72 ರಿಂದ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಶಾ ದಿ ಕೆ ಬಾ ದ್

ಪಾತ್ರ : ಜಿತೇಂದ್ರ, ರಾಖಿ, ಶತ್ರುಘ್ನಸಿನ್ಹ, ನಾಜ್ ಮತ್ತು ಶ್ಯಾಮ

ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satyavad Press, Chamarajapuram Mysore

SHAKTI SUDHA

A Superb Tonic

Quality Printing Neat Binding

Lakshminarasimha Pres

Sivarampet, Mysore

Help The Gorakshana

—Humanitarian Propoganda Monthly....



Protect the Cow

Bank Road Bahusar, A Fair Price Shop in Actual Practice